# Telephone Conversation between PM and King of Hashemite Kingdom of Jordan

April 16, 2020

---

## ಪ್ರಧಾನ  ಮಂತ್ರಿ ಮತ್ತು ಜೋರ್ಡಾನ್‌ನ ಹ್ಯಾಶೆಮೈಟ್ ಸಾಮ್ರಾಜ್ಯದ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 16, 2020

ಪ್ರಧಾನ  ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಜೋರ್ಡಾನ್‌ನ ಹಾಶೆಮೈಟ್ ಸಾಮ್ರಾಜ್ಯದ ಶ್ರೇಷ್ಠ ರಾಜ ಅಬ್ದುಲ್ಲಾ II ರೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದರು.

ಪ್ರಧಾನ  ಮಂತ್ರಿಯವರು ಪವಿತ್ರ ರಂಜಾನ್ ತಿಂಗಳಿಗಾಗಿ ಶ್ರೇಷ್ಠ ಮತ್ತು ಜೋರ್ಡಾನ್ ನ ಜನರಿಗೆ ಶುಭಾಶಯಗಳನ್ನು ತಿಳಿಸಿದರು.

ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಜಗತ್ತಿಗೆ ಎದುರಾಗುವ ಸವಾಲುಗಳನ್ನು ಮತ್ತು ಅದರ ಪ್ರಭಾವವನ್ನು ಸೀಮಿತಗೊಳಿಸಲು ಆಯಾ ದೇಶಗಳಲ್ಲಿ ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು. ಮಾಹಿತಿ ಮತ್ತು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವ ಮೂಲಕ ಹಾಗೂ ಅಗತ್ಯವಾದ ಸರಬರಾಜುಗಳನ್ನು ಸುಗಮಗೊಳಿಸುವ ಮೂಲಕ ಪರಸ್ಪರರ ಪ್ರಯತ್ನಗಳನ್ನು ಗರಿಷ್ಠ ಮಟ್ಟಿಗೆ ಬೆಂಬಲಿಸಲು ಅವರು ಒಪ್ಪಿಕೊಂಡರು.

ಜೋರ್ಡಾನ್‌ನಲ್ಲಿರುವ ಭಾರತೀಯ ನಾಗರಿಕರಿಗೆ ನೀಡಿದ ಬೆಂಬಲಕ್ಕಾಗಿ ಪ್ರಧಾನ  ಮಂತ್ರಿಯವರು ಶ್ರೇಷ್ಠರಿಗೆ ಧನ್ಯವಾದ ಅರ್ಪಿಸಿದರು.

ಕೋವಿಡ್-19 ಗೆ ಸಂಬಂಧಿಸಿದ ವಿಷಯಗಳ ಜೊತೆಗೆ ಇತರ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ತಮ್ಮ ತಂಡಗಳು ಸಂಪರ್ಕದಲ್ಲಿರುತ್ತವೆ ಎಂದು ನಾಯಕರು ಒಪ್ಪಿಕೊಂಡರು.

**ನವ ದೆಹಲಿ**
**ಏಪ್ರಿಲ್ 16, 2020**

DISCLAIMER: This is an approximate translation. The original is available in English on MEA’s website and may be referred to as the official press release.